ಮೊದಲನೇ ಹಂತದ ಫ್ಲ್ಯಾಟುಗಳು ದಿನಾಂಕ: 14-12-95 ಪೂರ್ಣಗೊಳ್ಳಬೇಕಿತ್ತು. ಆದರೆ 31-7-96ಕ್ಕೆ ಪೂರ್ಣಗೊಳ್ಳುವ ಸಂಭವವಿದೆ. 2ನೇ ಹಂತದಲ್ಲಿನ ಫ್ಲ್ಯಾಟುಗಳು ಡಿಸೆಂಬರ್ 96 ಅಂತ್ಯಕ್ಕೆ ಪೂರ್ಣಗೊಳ್ಳುವುದು.

ಆ) ಒಪ್ಪಂದದ ಪ್ರಕಾರ ಕೆಲಸಗಳು ಪೂರ್ಣಗೊಳ್ಳದ ಕಾರಣಕ್ಕಾಗಿ ದಿನಕ್ಕೆ ರೂ.50,000ರಂತೆ ಈಗಾಗಲೇ ರೂ.3.95 ಕೋಟಿಗಳನ್ನು ಗುತ್ತಿಗೆದಾರರುಗಳಿಂದ ವಸೂಲಿ ಮಾಡಲಾಗಿದೆ.

ವಿಷಯ:- ಬೆಂಗಳೂರಿನ ಅಗ್ರಹಾರ ದಾಸರ ಹಳ್ಳಿಯಲ್ಲಿ ಕರ್ನಾಟಕ ಗೃಹಮಂಡಳಿ ನಿರ್ಮಿಸಿರುವ ಮನೆಗಳ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 256 (650)

ಶ್ರೀ ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರದ ಅಗ್ರಹಾರ ದಾಸರಹಳ್ಳಿಯಲ್ಲಿರುವ ಕೆಹೆಚ್‌ಬಿ ಕಾಲೋನಿಯಲ್ಲಿ ಗೃಹ ಮಂಡಳಿಯವತಿಯಿಂದ ಯಾವಾಗ ಮನೆಗಳನ್ನು ನಿರ್ಮಿಸಲಾಯಿತು?

ಆ) ಹಾಗಿದ್ದಲ್ಲಿ ಎಷ್ಟು ಮನೆಗಳನ್ನು ಎಷ್ಟು ಶ್ರೇಣಿಗಳಲ್ಲಿ ಕಟ್ಟಲಾಗಿದೆ.

ಇ) ಜಾಹಿರಾತು ಮಾಡಿದಾಗ ಹಾಗೂ ಮನೆಗಳನ್ನು ಸ್ವಾಧೀನವಹಿಸಿದ ಮೇಲೆ ಹಾಗೂ ಮಾಹಿದೆ ತೀರಿದ ನಂತರ ಶುದ್ಧಕ್ರಯ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಮನೆಗಳ ಬೆಲೆ ಹೆಚ್ಚಿಸಿ ಹಂಚಿಕೆದಾರರಿಗೆ ಸಂಕಷ್ಟ ಹೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಗೃಹ ಮಂಡಳಿಯವರು ಮನೆ ಮಂಜೂರಾತಿಯನ್ನು ವರಮಾನದ ಆಧಾರದ ಮೇಲೆ ಹಂಚಿ 10-15 ವರ್ಷಗಳ ನಂತರ ಯಾವ ಆಧಾರದ ಮೆಲೆ ಮನೆಗಳ ಬೆಲೆಗಳನ್ನು ಶೇಕಡ 200ರಿಂದ 300ರಷ್ಟು ಹೆಚ್ಚಿಸಿರುವುದು.

ಉ) ಅಗ್ರಹಾರ ದಾಸರಹಳ್ಳಿಯಲ್ಲಿರುವ ಕೆಹೆಚ್‌ಬಿ ಕಾಲೋನಿಯಲ್ಲಿ ನಕಾಸೆಯಲ್ಲಿ ನಮೂದಿಸಿರುವ ಅನೇಕ ಸಾರ್ವಜನಿಕ ಉಪಯೋಗಿ ನಿವೇಶನಗಳನ್ನು ಮಂಡಳಿಯವರು ಹೆಚ್ಚಿನ ಬೆಲೆಗಳಿಗೆ ಮಾರಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-

ಅ) 1976-77 ಮತ್ತು 1980-81ರಲ್ಲಿ ಎರಡು ಹಂತಗಳಲ್ಲಿ ನಿರ್ಮಿಸಲಾಯಿತು.

ಆ)

| ವರ್ಗ | 1ನೇ ಹಂತ | 2ನೇ ಹಂತ | ಒಟ್ಟು |
|---|---|---|---|
| ಇಡಬ್ಲ್ಯೂಎಸ್ | 175 | 475 | 650 |

| | | | |
|---|---|---|---|
| ಎಲ್‌ಐಜಿ | 80 | 154 | 234 |
| ಎಂಐಜಿ | 80 | 161 | 241 |
| ಹೆಚ್‌ಐಜಿ | - | 54 | 54 |
| | 335 | 844 | 1179 |

ಇ) ತಾತ್ಕಾಲಿಕ ಬೆಲೆಯ ಅಂದಾಜನ್ನು ಅನುಸರಿಸಿ ಹಂಚಿಕೆದಾರರಿಗೆ ಗುತ್ತಿಗೆ ಮತ್ತು ಮಾರಾಟ ಒಪ್ಪಂದವನ್ನು ನೀಡಲಾಗುವುದು. ಯೋಜನೆಯು ಮುಗಿದ ನಂತರ ವಾಸ್ತವಿಕ ಖರ್ಚು ಅಂದರೆ ನ್ಯಾಯಾಲಯ ಪರಿಹಾರ ಮುಂತಾದವುಗಳನ್ನು ಪರಿಗಣಿಸಿ ಬೆಲೆಯನ್ನು ಮತ್ತು ವಾಸ್ತವಿಕ ಅಭಿವೃದ್ಧಿ ವೆಚ್ಚವನ್ನು ಅನುಸರಿಸಿ ಅಂತಿಮ ಬೆಲೆಯನ್ನು ನಿಗಧಿಪಡಿಸಲಾಗುವುದು.

ಈ) ತಾತ್ಕಾಲಿಕ ಬೆಲೆಗೆ ಹಾಗೂ ಅಂತಿಮ ಬೆಲೆಗೆ ಉಂಟಾಗುವ ಶೇಕಡವಾರು ಹೆಚ್ಚಳವು ಮೊದಲನೇ ಹಂತದ ಇಡಬ್ಲ್ಯೂಎಸ್, ಎಲ್‌ಐಜಿ, ಎಂಐಜಿ, ಮನೆಗಳಿಗೆ ಕ್ರಮವಾಗಿ ಶೇಕಡ 43, 56 ಹಾಗೂ 31 ಆಗಿರುತ್ತದೆ. 2ನೇ ಹಂತದ ಮನೆಗಳಿಗೆ ಶೇಕಡ 88, 83, 63 ಆಗಿರುತ್ತದೆ.

ಉ) ಕರ್ನಾಟಕ ಗೃಹ ಮಂಡಳಿಯ ಪಾಂಚಜನ್ಯ ವಿದ್ಯಾ ಸಂಸ್ಥೆಗೆ ಶಾಲೆಗಾಗಿ 1 ಸಿ.ಎ.ನಿವೇಶನ ಮಂಜೂರು ಮಾಡಿದೆ. ಇದಲ್ಲದೆ ಯಾವ ಸಿ.ಎ. ನಿವೇಶನವನ್ನು ಮಂಜೂರು ಮಾಡಿರುವುದಿಲ್ಲ.

ವಿಷಯ:- ಮೈಸೂರು ನಗರದಲ್ಲಿರುವ ವಸತಿ ನಿವೇಶನ ರಹಿತರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 258 (523)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ವಸತಿ ರಹಿತರ ನಿವೇಶನ ರಹಿತರ ಸಂಖ್ಯೆ ಎಷ್ಟು?

ಆ) ಮೈಸೂರು ನಗರದಲ್ಲಿ ವಸತಿರಹಿತರ:ನಿವೇಶನ ರಹಿತರ ಸಂಖ್ಯೆ ಎಷ್ಟು?

ಇ) ಇವರುಗಳಿಗೆ ವಸತಿ - ನಿವೇಶನ ನೀಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ಇವರೆಲ್ಲರಿಗೂ ವಸತಿ - ನಿವೇಶನ ನೀಡಲು ನಿಗದಿತ ಅವಧಿ ಏನಾದರೂ ಗೊತ್ತುಪಡಿಸಲಾಗಿದೆಯೇ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-